**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ**

**ಸಿ.ಸಿ.39/2024**

ಸಾಕ್ಷಿದಾರರ ಹೇಳಿಕೆ:

| | | |
|---|---|---|
| ಹೆಸರು | : ಕೆ. ಮಂಜಪ್ಪ | ಚಾಸಾ: **1** ಪ್ರಾಸಾ: **1** |
| ತಂದೆಯ ಹೆಸರು | : ಕೆಂಚಪ್ಪ | |
| ವಯಸ್ಸು | : 46 | |
| ವೃತ್ತಿ | : ಹೆಚ್ ಸಿ 168 | |
| ವಾಸಸ್ಥಳ | : ಹೊನ್ನಾಳಿ | |

ದಿನಾಂಕ: **12.03.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:

ನಾನು 2019 ರಿಂದ ಇಲ್ಲಿಯವರೆಗೂ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ: 05.07.2023 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ನ್ಯಾಮತಿ ಪೋಲೀಸ್ ಠಾಣಾ ವ್ಯಾಪ್ತಿಯ ಸಾಲಬಾಳು ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ ಶಿವಮೊಗ್ಗ ಹೊನ್ನಾಳಿ ಮುಖ್ಯರಸ್ತೆಯ ಸಾಲಬಾಳು ಕ್ರಾಸ್ ಹತ್ತಿರ ಪೆಟ್ಟಿಗೆ ಅಂಗಡಿಯ ಮುಂಭಾಗ ರಮೇಶ್ ನಾಯ್ಕ ತಂದೆ ಯಂಕ್ಯಾನಾಯ್ಕ ರವರು ಸರ್ಕಾರದಿಂದ ಯಾವುದೇ ಪರವಾನಗೆ ಇಲ್ಲದೇ ಸಾರ್ವಜನಿಕವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿಯ ಮೇರೆಗೆ ನಾನು ಮರಳಿ ಮಧ್ಯಾಹ್ನ 12.30 ಕ್ಕೆ ಠಾಣೆಗೆ ಹೋಗಿ ವರದಿ ತಯಾರಿಸಿ ರಮೇಶ್ ನಾಯ್ಕ ಎಂಬ ವಿರುದ್ಧ ದೂರು ನೀಡಿರುತ್ತೇನೆ.

ನಂತರ ಚಾಸಾ 7 ರವರನ್ನು ನನ್ನನ್ನು ಹಾಗೂ ಚಾಸಾ 4 ರಿಂದ 7 ರವರನ್ನು ಕರೆದುಕೊಂಡು ಹಾಗೂ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಮಧ್ಯಾಹ್ನ

1.30 ಗಂಟೆಯಲ್ಲಿ ಠಾಣೆಯನ್ನು ಬಿಟ್ಟು ಇಲಾಖಾ ಜೀಪಿನಲ್ಲಿ ಸಾಲಬಾಳು ಕ್ರಾಸ್ ಗೆ ಹೋಗಿ ಸ್ವಲ್ಪ ಮರೆಯಲ್ಲಿ ನಿಂತು ನೋಡಲಾಗಿ ಸಾಲಬಾಳು ಕ್ರಾಸ್ ನ ಪೆಟ್ಟಿಗೆ ಅಂಗಡಿ ಮುಂಭಾಗ ಒಬ್ಬ ಆಸಾಮಿಯು ಚೀಲದಲ್ಲಿ ಮಧ್ಯದ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದು ಕಂಡು ಬಂದು, ನಾವು ಎಲ್ಲರೂ ಸುತ್ತುವರೆದು ದಾಳಿ ಮಾಡಿದಾಗ ಸದರಿ ಆಸಾಮಿಯು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಹಿಡಿದುಕೊಂಡು ಹೆಸರು , ವಿಳಾಸ ಕೇಳಲಾಗಿ ಆತನ ಹೆಸರು ರಮೇಶ್ ನಾಯ್ಕ ತಂದೆ ಯಂಕ್ಯಾನಾಯ್ಕ , 45 ವರ್ಷ, ಸಾಲಬಾಳು ಗ್ರಾಮ ಎಂದು ತಿಳಿಸಿರುತ್ತಾನೆ.

ಪಂಚರ ಸಮಕ್ಷಮ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ 31 ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಪೌಚ್ ಗಳು ಇದ್ದವು. ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಎಲ್ಲಾ ಪೌಚ್ ಗಳನ್ನು ಪಂಚರ ಸಮಕ್ಷಮ ಚೀಲದಲ್ಲಿ ಹಾಕಿ ಎನ್ ಎಂ ಟಿ ಎಂದು ಸೀಲು ಮಾಡಿ ಪಂಚರ ಸಹಿಯನ್ನು ಅಂಟಿಸಿ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹೋಗಿರುತ್ತೇವೆ ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2.45 ಗಂಟೆ ಸಮಯದಲ್ಲಿ ಮಾಡಿರುತ್ತೇವೆ. ಪಂಚನಾಮೆಯ ಸಮಯದಲ್ಲಿ ಪೋಟೋ ತೆಗೆದಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಾಗೂ ಮಧ್ಯದ ಪೌಚ್ ಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಪೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಈ ಸಂಬಂಧ ನಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು, ಪೋಟೋವನ್ನು ನಿಪಿ 2 ಎಂದು ಗುರುತಿಸಲಾಯಿತು. ಮಧ್ಯದ ಪೌಚ್ ಗಳಿರುವ ಬಿಳಿ ಬ್ಯಾಗ್ ನ್ನು ಮು.ಮಾ 1 ಎಂದು ಗುರುತಿಸಲಾಯಿತು. ಪಾನ್ ಮಸಾಲ ಬ್ಯಾಗ್ ನ್ನು ನಿಪಿ 2 ಎಂದು ಗುರುತಿಸಲಾಯಿತು.

ಪಾಟೀ ಸವಾಲು **:-** ಆರೋಪಿ ಪರ ಶ್ರೀ.ಎಸ್ ಎಂ ಬಿ ವಕೀಲರರಿಂದ **:-**

ದಿಃ 05.07.2023 ರಂದು ನಾವು ಆರೋಪಿಯ ಮೇಲೆ ದಾಳಿ ಮಾಡುವ ಮುನ್ನ ಬೇರೆ ಯಾವ ಯಾವ ಜಾಗಗಳಲ್ಲಿ ಯಾವ ಯಾವ ಸಮಯದಲ್ಲಿ ದಾಳಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಠಾಣೆಯಿಂದ ನೇರವಾಗಿ ದಾಳಿಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ಯಾವ ಸಮಯಕ್ಕೆ ಹೋಗಿರುತ್ತೇವೆ ಎಂದರೆ ಸಾಕ್ಷಿ ಮಧ್ಯಾಹ್ನ 1.45 ಕ್ಕೆ ಎಂದು ನುಡಿಯುತ್ತಾರೆ. ಪಂಚರಾದ ಚಾಸಾ 2 ಮತ್ತು 3 ರವರನ್ನು ಎಲ್ಲಿ ಬರಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಠಾಣಾ ಆವರಣದಲ್ಲೇ ಇದ್ದರೂ ಅಲ್ಲಿಂದಲೇ ಕರೆದುಕೊಂಡಿರುತ್ತೇವೆ ಎಂದು

ನುಡಿಯುತ್ತಾರೆ. ಪಂಚರು ಯಾವ ಸಮಯಕ್ಕೆ ಪೋಲೀಸ್ ಠಾಣೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿ ಮಧ್ಯಾಹ್ನ 1.25 ಎಂದು ನುಡಿಯುತ್ತಾರೆ. ಮು.ಮಾ 1 ರೀತಿಯ ಮುದ್ದೆ ಮಾಲುಗಳು ಬೇರೆ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾವು ದಾಳಿ ಮಾಡಿದಾಗ ಆರೋಪಿ ನಮ್ಮನ್ನು ನೋಡಿ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟನು ಎಂದು ಸುಳ್ಳು ಹೇಳಿರುತ್ತೇನೆಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾವು ಯಾವುದೇ ದಾಳಿ ಮಾಡಿಲ್ಲ , ಸ್ಥಳ ಪಂಚನಾಮೆ ಮಾಡಿಲ್ಲ, ನಿಪಿ 2 ರಂತೆ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ 2 ನ್ನು ಈ ಪ್ರಕರಣಕ್ಕೂ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಸ್ಥಳ ಪಂಚನಾಮೆಗೆ ಪಂಚರ ಸಹಿಗಳನ್ನು ಠಾಣೆಯಲ್ಲೇ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇಲಾಖಾ ಪ್ರಕರಣಗಳನ್ನು ಹೆಚ್ಚಿಸಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2 ನ್ನು ಆರೋಪಿಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಸಾಯನಿಕ ಪರೀಕ್ಷೆಗೆ ಯಾವುದೇ ಮಧ್ಯವನ್ನು ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ಮರೆಯಲ್ಲಿ ನಿಂತು ಆರೋಪಿಯನ್ನು ನೋಡಿರುತ್ತೀನಿ ಎಂದರೆ ಸಾಕ್ಷಿಯು ಸಾಲಬಾಳು ಬಸ್ ನಿಲ್ದಾಣದ ಹತ್ತಿರ ಸುಮಾರು 50 ಮೀ ಅಂತರದಿಂದ ನೋಡಿರುತ್ತೇವೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.